ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 8–1–2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಆಕಾಶವಾಣಿ, ದೂರದರ್ಶನ ದಕ್ಷಿಣ ವಲಯ ಸಮ್ಮೇಳನ.<br>ಉದ್ಘಾಟನೆ:<br>ಶ್ರೀ ಜವಾಹರ್ ಸರ್ಕಾರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಪ್ರಸಾರ ಭಾರತಿ.<br>ಆಶಯ ಭಾಷಣ:<br>ಡಾ. ಎ. ಸೂರ್ಯ ಪ್ರಕಾಶ್, ಅಧ್ಯಕ್ಷರು, ಪ್ರಸಾರ ಭಾರತಿ<br>ಮುಖ್ಯ ಅತಿಥಿಗಳು:<br>ಶ್ರೀ ಎಫ್. ಶೆಹರಿಯಾರ್, ಮಹಾ ನಿರ್ದೇಶಕರು, ಆಕಾಶವಾಣಿ | 09–01–2015<br>ಶುಕ್ರವಾರ<br>ಬೆಳಗ್ಗೆ<br>10–00<br>ಗಂಟೆಗೆ | ಹೋಟೆಲ್ ಛಾನ್ಸರಿ ಫೆವಿಲಿಯನ್, ರೆಸಿಡೆನ್ಸಿ ರಸ್ತೆ, ಬೆಂಗಳೂರು. |
| 2 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ<br>ಪತ್ರಿಕಾಗೋಷ್ಠಿ:<br>ಶ್ರೀ ಕೋ. ಚನ್ನಬಸಪ್ಪ,<br>ರಾಷ್ಟ್ರಕವಿ ಆಯ್ಕೆ ಸಮಿತಿ, ಅಧ್ಯಕ್ಷರು | 09–01–2015<br>ಶುಕ್ರವಾರ<br>ಬೆಳಗ್ಗೆ<br>11–00<br>ಗಂಟೆಗೆ | ಅಂತರಂಗ, ಕನ್ನಡ ಭವನ ಬೆಂಗಳೂರು. |
| 3 | ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ<br>ಪತ್ರಿಕಾಗೋಷ್ಠಿ: | 09–01–2015<br>ಶುಕ್ರವಾರ<br>ಬೆಳಗ್ಗೆ | ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಸಭಾಂಗಣ,<br>ಆರನೇ ಮಹಡಿ, |

| | | | |
|---|---|---|---|
| | ಶ್ರೀ ಎಂ.ಆರ್. ರಂಗಶಾಮಯ್ಯ,<br>ಮಂಡಳಿ ಅಧ್ಯಕ್ಷರು,<br>ಡಾ: ಹೊ. ಶ್ರೀನಿವಾಸಯ್ಯ,<br>ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷರು | 11-30 ಗಂಟೆಗೆ | ವಿಶ್ವೇಶ್ವರಯ್ಯ ಮುಖ್ಯ ಗೋಪುರ,<br>ಡಾ: ಬಿ.ಆರ್. ಅಂಬೇಡ್ಕರ್ ವೀಧಿ,<br>ಬೆಂಗಳೂರು |
| 4 | ಕ್ರೀಬ್‌ಕೋ ನೀಮ್ ಕೋಟೆಡ್ ಯೂರಿಯಾ<br>ಚಾಲನೆ:<br>ಶ್ರೀ ಅನಂತಕುಮಾರ್, ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆಯ ಸಚಿವರು.<br>ಮುಖ್ಯ ಅತಿಥಿಗಳು:<br>ಶ್ರೀ ಡಿ.ವಿ. ಸದಾನಂದ ಗೌಡ, ಕೇಂದ್ರ ಕಾನೂನು ಸಚಿವರು.<br>ಶ್ರೀ ರಾಧಾಮೋಹನ್ ಸಿಂಗ್, ಕೇಂದ್ರ ಕೃಷಿ ಸಚಿವರು.<br>ಸೂಚನೆ: ಕಬ್ಬನ್ ಪಾರ್ಕ್‌ನ ಪ್ರೆಸ್ ಕ್ಲಬ್ ಆವರಣದಿಂದ ಬೆಳಿಗ್ಗೆ 11-00 ಗಂಟೆಗೆ ವ್ಯವಸ್ಥೆ ಇದೆ. | 09-01-2015<br>ಶುಕ್ರವಾರ<br>ಅಪರಾಹ್ನ<br>12-00 ಗಂಟೆಗೆ | ಕೃಷಿ ವಿಶ್ವವಿದ್ಯಾನಿಲಯ,<br>ಜಿ.ಕೆ.ವಿ.ಕೆ.<br>ಬೆಂಗಳೂರು. |
| 5 | ತೋಟಗಾರಿಕಾ ಇಲಾಖೆ<br>ಹಾರ್ಟಿ ಸಂಗಮ – 2015 ಅಂತರರಾಜ್ಯ ತೋಟಗಾರಿಕಾ ಮೇಳ.<br>ಉದ್ಘಾಟನೆ:<br>ಶ್ರೀ ರಾಧಾಮೋಹನ್ ಸಿಂಗ್, ಕೇಂದ್ರ ಕೃಷಿ ಸಚಿವರು.<br>ಮುಖ್ಯ ಅತಿಥಿಗಳು:<br>ಶ್ರೀ ಅನಂತಕುಮಾರ್, ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆಯ ಸಚಿವರು | 09-01-2015<br>ಶುಕ್ರವಾರ<br>ಮಧ್ಯಾಹ್ನ<br>3-00 ಗಂಟೆಗೆ | ಲಾಲ್‌ಬಾಗ್,<br>ಬೆಂಗಳೂರು |

| | | | |
|---|---|---|---|
| | ಶ್ರೀ ಶ್ಯಾಮನೂರು ಶಿವಶಂಕರಪ್ಪ, ರಾಜ್ಯ ತೋಟಗಾರಿಕೆ ಮತ್ತು ಮಾರುಕಟ್ಟೆ ಸಚಿವರು. | | |

ನಿರ್ದೇಶಕರ ಪರವಾಗಿ

**ಪತ್ರಿಕಾ ಪ್ರಕಟಣೆ**

## ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯತಿ ತೆರವಾದ ಸ್ಥಾನಗಳಿಗೆ ಚುನಾವಣೆ

ಬೆಂಗಳೂರು, ಜನವರಿ ೮ (ಕರ್ನಾಟಕ ವಾರ್ತೆ)

ರಾಜ್ಯದ ಒಟ್ಟು ಆರು ಜಿಲ್ಲಾ ಪಂಚಾಯಿತಿ ಹಾಗೂ ಒಂಭತ್ತು ತಾಲ್ಲೂಕು ಪಂಚಾಯತ್‌ಗಳಲ್ಲಿ ತೆರವಾದ ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ.

ರಾಜ್ಯ ಚುನಾವಣಾ ಆಯೋಗವು ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ದಕ್ಷಿಣ ಕನ್ನಡ, ಬೆಳಗಾವಿ, ಕೊಪ್ಪಳ, ವಿಜಯಪುರ,ಕಲಬುರಗಿ, ಬಳ್ಳಾರಿ ಜಿಲ್ಲೆಗಳಲ್ಲಿ ತೆರವಾಗಿರುವ ಎಲ್ಲಾ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯ ಸ್ಥಾನಗಳಿಗೆ ಚುನಾವನೆ ನಡೆಸಲು ಚುನಾವಣಾ ವೇಳಾ ಪಟ್ಟಿಯನ್ನು ಪ್ರಕಟಿಸಿದೆ.

ಚುನಾವಣಾ ನೀತಿ ಸಂಹಿತೆಯು ಚುನಾವಣೆ ನಡೆಯುವ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಮತ್ತು ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ವ್ಯಾಪ್ತಿಯಲ್ಲಿ ದಿನಾಂಕ 13–01–2015 ರಿಂದ 05–2–2015 ರವರೆಗೆ ಜಾರಿಯಲ್ಲಿರುತ್ತದೆ.

ಜಿಲ್ಲಾಧಿಕಾರಿಗಳು ಚುನಾವಣಾ ಅಧಿಸೂಚನೆಯನ್ನು ದಿನಾಂಕ 13–01–2015 ರಂದು ಹೊರಡಿಸುವರು ನಾಮಪತ್ರಗಳನ್ನು ಸಲ್ಲಿಸಲು 20–01–2015 ಕೊನೆಯ ದಿನಾಂಕವಾಗಿರುತ್ತದೆ, ನಾಮಪತ್ರಗಳನ್ನು ಪರಿಶೀಲನೆ ದಿನಾಂಕ 21–01–2015 ರಂದು ನಡೆಯಲಿದ್ದು ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಲು 23–01–2015 ಕೊನೆಯ ದಿನಾಂಕವಾಗಿರುತ್ತದೆ. ಮತದಾನವು ದಿನಾಂಕ 01–02–2015 (ಮತದಾನದ ಸಮಯ ಬೆಳಿಗ್ಗೆ 7–00 ಗಂಟೆಯಿಂದ ಸಾಯಂಕಾಲ 5–00 ಗಂಟೆವರೆಗೆ ನಡೆಯಲಿದೆ. ಮತಗಳ ಎಣಿಕೆಯನ್ನು ತಾಲ್ಲೂಕು ಕೇಂದ್ರ ಸ್ಥಳಗಳಲ್ಲಿ ದಿನಾಂಕ 04–02–2015 ರಂದು ಬೆಳಿಗೆ 8–00 ಗಂಟೆಯಿಂದ ನಡೆಸಲಾಗುವುದು ಎಂದು ರಾಜ್ಯ ಚುನಾವಣಾ ಆಯೋಗದ ಅಧೀನ ಕಾರ್ಯದರ್ಶಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಹೊ:ಬಾಬು:ಜಿಪಿಆರ್.

## DAK ADALAT

**Bangalore, January 8 (Karnataka Information)**

**The Chief Postmaster General, Karnataka Postal Circle, No. 1, Beaulieu, Palace Road (Opposite Maharani's College of Science) Bengaluru-560 001 will conduct a "DAK ADALAT" for redresssal of public grievances relating to Postal Services on 29th January 2015 at 16-00 hours in the Conference hall , o/o the Chief Postmaser General, Karnataka Postal Circle, No., 1, Beaulieu, Palace Road (Opposite Maharani's College of Science) Bengaluru – 560 001. Members of the public and esteemed customers of Department of Posts in Bengaluru Region may address their grievances if any, to the Assistant Director (Postal Operations), o/o Chief Postmaster General, Karnataka Circle, Bengaluru – 560 001, as as to reach the officer latest by 21 st January 2015. Grievances can also be sent by e-mail to karcopo@gmail.com. It is requested that brief and specific details with relevant facts and figures may please be furnished along with complete contact details to facilitate speedy redressal.**

**ph/babu/gpr.**

## ಮಾಧ್ಯಮಗಳಲ್ಲಿ ದಲಿತ ಮೀಸಲಾತಿ ಅಲ್ಲ, ಸಕಾರಾತ್ಮಕ ಕ್ರಮ ಅಳವಡಿಸುವುದು ಅಗತ್ಯ

**: ಕೋಟಿಗಾನಹಳ್ಳಿ ರಾಮಯ್ಯ**

ಬೆಂಗಳೂರು, ಜನವರಿ 8 (ಕರ್ನಾಟಕ ವಾರ್ತೆ) : ಇಂದಿನ ಭಾರತದ ಆಧುನಿಕ ಸಮಾಜದಲ್ಲಿ ಯಾವುದೇ ಒಂದು ಮುಖ್ಯವಾಹಿನಿ ಪತ್ರಿಕೆ / ಮಾಧ್ಯಮ ಸಂಸ್ಥೆಯಲ್ಲಿ ಒಬ್ಬ ದಲಿತ ಪತ್ರಕರ್ತನೂ ನಿರ್ಣಾಯಕ ಸ್ಥಾನದಲ್ಲಿ ಕುಳಿತಿರುವುದು ಕಾಣುವುದಿಲ್ಲ ಎಂದು ಹಿರಿಯ ಸಾಹಿತಿ, ದಲಿತ ಚಿಂತಕ ಕೋಟಿಗಾನಹಳ್ಳಿ ರಾಮಯ್ಯ ವಿಷಾದಿಸಿದ್ದಾರೆ.

ಕರ್ನಾಟಕ ಮಾಧ್ಯಮ ಅಕಾಡೆಮಿಯು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ರಾಜ್ಯ ಪ.ಜಾ/ಪ.ಪಂ ಪತ್ರಿಕ ಸಂಪಾದಕರ ಸಂಘ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸಹಯೋಗದಲ್ಲಿ ಇಂದು ನಡೆದ 'ಮಾಧ್ಯಮಗಳಲ್ಲಿ ದಲಿತ ಸಂವೇದನೆ' ವಿಶೇಷ ಕಾರ್ಯಾಗಾರದಲ್ಲಿ ದಲಿತ ಪ್ರಜ್ಞೆ ಹಾಗೂ ಮಾಧ್ಯಮ ಕುರಿತು ವಿಷಯ ಮಂಡನೆ ಮಾಡಿದ ಅವರು ಪತ್ರಿಕೆ, ಮಾಧ್ಯಮಗಳಲ್ಲಿ ಹೊರಬರುವ

ವಿಷಯಗಳ ಬಗ್ಗೆ ತೀರ್ಮಾನಿಸುವವರಲ್ಲಿ ದಲಿತರ ಹೆಸರು ಸೇರ್ಪಡೆಯಾದಾಗ ಮಾತ್ರ ಮಾಧ್ಯಮಗಳಲ್ಲಿ ದಲಿತ ಸಂವೇದನೆ ಸಾಕಾರ ಗೊಳ್ಳುವುದು ಎಂದು ಅಭಿಪ್ರಯ ಪಟ್ಟರು. ಇಂದಿನ ಮಾಧ್ಯಮಗಳು ಮಾಕ್‌ಬೆತ್ ನಾಟಕದ ಮೂರು ಯಕ್ಷಿಣಿಯರಂತೆ ಕೆಲಸ ಮಾಡುತ್ತಿವೆ. ಸಮಾಜದ ನೈಜ ಸಮಸ್ಯೆಗಳನ್ನು ಪ್ರತಿಬಿಂಬಿಸದೆ, ಕಲ್ಮಷಗಳ ಪಾಕವನ್ನೇ ತಯಾರಿಸುವಲ್ಲಿ ತಲ್ಲೀನವಾಗಿವೆ ಎಂದರು.

ಇದಕ್ಕೂ ಮುನ್ನ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಸಮಾಜ ಕಲ್ಯಾಣ ಸಚಿವ ಆಂಜನೇಯ ಅವರು ಇಂದು ದಲಿತರು ದೇವಾಲಯಗಳಿಗೆ ಪ್ರವೇಶ ಕೋರುವ ಬದಲು, ಪಂಚಾಯತ್ ರಾಜ್ ವ್ಯವಸ್ಥೆಯೊಳಗೆ ಅಂದರೆ ಗ್ರಾಮ ಪಂಚಾಯತ್, ಜಿಲ್ಲಾ ಪಂಚಾಯತ್, ವಿಧಾನಸಭೆಗಳಿಗೆ ಪ್ರವೇಶ ಕೋರಬೇಕು ಎಂದು ಕಿವಿಮಾತು ಹೇಳಿದರು.

<u>ತಂತ್ರಜ್ಞಾನ ಪೂರಕ ಸೌಲಭ್ಯ ನೀಡಲು ಚಿಂತನೆ:</u> ರಾಜ್ಯ ಸರ್ಕಾರವು ದೇಶದಲ್ಲೇ ಮೊದಲ ಬಾರಿಗೆ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಬುಡಕಟ್ಟುಗಳ ಕಾರ್ಯಕ್ರಮಗಳ ಅನುಷ್ಠಾನ ಕಾಯ್ದೆ-2013ಯನ್ನು ಜಾರಿಗೆ ತಂದಿರುವ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಪರಿಶಿಷ್ಟ ಜಾತಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆ ಅಡಿಯಲ್ಲಿ ನೀಡಲಾಗಿರುವ 1.71 ಕೋಟಿ ಅನುದಾನ ಸಾಲದು. ಈ ಸಮುದಾಯದ ಪತ್ರಿಕೆ ಹಾಗೂ ಪತ್ರಕರ್ತರನ್ನು ಮುಖ್ಯ ವಾಹಿನಿಗೆ ತರಲು ಹಾಗೂ ಸ್ಪರ್ಧಾತ್ಮಕವಾಗಿ ಬೆಳೆಯಲು ಸರ್ಕಾರದಿಂದ ತಂತ್ರಜ್ಞಾನ ಪೂರಕ ಪರಿಕರ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸುವ ಚಿಂತನೆ ಇದೆ ಎಂದು ತಿಳಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಲ್ ಹನುನಮಂತಯ್ಯ ಅವರು ಮಾತನಾಡಿ ಇಂದಿನ ಮಾಧ್ಯಮ ಸಂಸ್ಥೆಗಳು ಟಿ.ಆರ್.ಪಿ ಪ್ರೇರಿತ ವಿಷಯಗಳನ್ನು ಮಾತ್ರ ವೈಭವೀಕರಿಸಿ ಸುದ್ದಿ ಮಾಡುತ್ತಿವೆ. ನಾಡಿನ ಕಂದಮ್ಮಗಳ, ಮಹಿಳೆಯರ ಮೇಲಿನ ದೌರ್ಜನ್ಯಗಳ ಸುದ್ದಿ ಸರಣಿಗಳು ನೋಡಸಿಗುವಂತೆ ಪ್ರತಿನಿತ್ಯ ದೇಶದಾದ್ಯಂತ ದಲಿತರ ಮೇಲೆ ನಡೆಯುವ ದೌರ್ಜನ್ಯಗಳು ಪ್ರಾಮುಖ್ಯತೆ ಪಡೆಯುತ್ತಿಲ್ಲ ಎಂದು ವಿಷಾಧಿಸಿದರು. ಇಂದು ಒಬ್ಬ ದಲಿತ ವರ್ಗಕ್ಕೆ ಸೇರಿದ ನೌಕರ ತನ್ನ ವೃತ್ತಿಯ ಏಳ್ಗೆಗಾಗಿ ಹೋರಾಟದ ಮಾರ್ಗವನ್ನೇ ಅನುಸರಿಸುವ ಸ್ಥಿತಿ ಇದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಾರ್ತಾ ಸಚಿವ ರೋಷನ್ ಬೇಗ್ ಅವರು ಮಾತನಾಡಿ ಇಂದಿಗೂ ಒಮದು ದೊಡ್ಡ ಪಂಚತಾರ ಹೊಟೆಲ್ ನಿಂದ ಹಿಡಿದು ಹಳ್ಳಿಗಳಲ್ಲಿರುವ ಸಣ್ಣ ಸಣ್ಣ ಸಂಸ್ಥೆ ಕಚೇರಿಗಳಲ್ಲೂ ಶೌಚಾಲಯ ಶುಚಿಗೊಳಿಸುವ ಕಾರ್ಯ ದಲಿತ ಸಮುದಾಯದವರೇ ಮಾಡುತ್ತಿದ್ದಾರೆ. ಆದರೆ ಮಾಧ್ಯಮಗಳಲ್ಲಿ ಕ್ಯಾಮೆರಾ ಮುಂದೆ ಸುದ್ದಿ ವಾಚನ ಅಥವಾ ಕಾರ್ಯಕ್ರಮ ನಿರೂಪಕರಲ್ಲಿ ಒಬ್ಬ ದಲಿತ ಮುಖವೂ ಕಾಣಲು ಸಿಗುವುದಿಲ್ಲ ಎಂದು ಸಮಾಜದ ವ್ಯವಸ್ಥೆಗೆ ವಿಷಾಧ ವ್ಯಕ್ತಪಡಿಸಿದರು.

ಮೈಸೂರು ವಿಶ್ವವಿದ್ಯಾಲಯ ಸಮೂಹ ಸಂವಹನ ವಿಭಾಗದ ಪ್ರಾಧ್ಯಪಕರಾದ ಪ್ರೊ. ಬಿ.ಪಿ. ಮಹೇಶ್‌ಚಂದ್ರ ಗುರು ಅವರು ಸರ್ಕಾರದ ಸವಲತ್ತುಗಳು ಹಾಗೂ ಮಾಧ್ಯಮ ಕುರಿತು ಮಾತನಾಡುತ್ತಾ ಮಾಧ್ಯಮಗಳು ಯಾಜಮಾನಿಕ ಮಾದರಿಯನ್ನು ತ್ಯಜಿಸಿ ಎಲ್ಲ ಪಾಲ್ಗೊಳ್ಳುವಿಕೆ (ಪರ್ಟಿಸಿಪೆಟರಿ ಕಮ್ಯುನಿಕೇಶನ್) ಇದನ್ನು ಅಳವಡಿಸಿಕೊಂಡು ಜನರಲ್ಲಿ ಅಭಿವೃದ್ದಿ ಪ್ರಜ್ಞೆಯನ್ನು ಬೆಳೆಸಬೇಕು. ಮಾಧ್ಯಮಗಳು ಮೂಲಭೂತವಾದ ಕೋಮುವಾದ ಜಾತಿವಾದ ಮೊದಲಾದ ಪ್ರವೃತ್ತಿಗಳನ್ನು ವಿರೋಧಿಸಿ ಸಮಾನತೆ ಸ್ವಾತಂತ್ರ್ಯತೆ ಭಾತೃತ್ವವಾದ ಒಳಗೊಳ್ಳುವ ಸುಸ್ಥಿರ ಅಭಿವೃದ್ಧಿಯನ್ನು ತಿಳಿಸಬೇಕು.

ಅಭಿವೃದ್ಧಿ ಮಂತ್ರಗಳಾದ ಡಾ: ಅಂಬೇಡ್ಕರ್ ಅವರ ಅಂತ್ಯೋದಯ ಹಾಗೂ ಮಹಾತ್ಮ ಗಾಂಧೀಜಿಯವರ ಸರ್ವೋದಯ ಮಾದರಿಗಳನ್ನು ಅಭಿವೃದ್ಧಿ ಪರ ಸರ್ಕಾರಗಳು ಅಳವಡಿಸಿಕೊಳ್ಳಬೇಕು ಎಂದರು. ರಾಷ್ಟ್ರೀಯ ಮುಖ್ಯ ವಾಹಿನಿಯಿಂದ ದೂರ ಸರಿದಿರುವ ರೈತರು, ಕಾರ್ಮಿಕರು, ದಲಿತರು ಅಲ್ಪಸಂಖ್ಯಾತರು ಹಾಗೂ ಆದಿವಾಸಿಗಳು ಒಳಗೊಳ್ಳುವ ಅಭಿವೃದ್ಧಿ ಪ್ರಕ್ರಿಯೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ತೊಡಗಿಸಿಕೊಳ್ಳಬೇಕು. ಇಂದು ಮಾಧ್ಯಮಗಳು ಅಭಿವೃದ್ಧಿ ಹಾಗೂ ದಲಿತರ ಧ್ವನಿಯಾಗದೆ, ಶ್ರೀಮಂತರ ಸ್ವತ್ತಾಗಿದೆ ಎಂದು ತಿಳಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಅನೇಕ ಯೋಜನೆಗಳನ್ನು ಜಾರಿ ಮಾಡಿದ್ದು, ಅವುಗಳು ಸರಿಯಾದ ಪ್ರಮಾಣದಲ್ಲಿ ಸದ್ಬಳಕೆಯಾಗುತ್ತಿಲ್ಲ. ಇದಕ್ಕೆ ಅಧಿಕಾರಿಗಳ ಹಾಗೂ ಆಳುವ ಜನಪ್ರತಿನಿಧಿಗಳ ನಿರ್ಲಕ್ಷ್ಯ ಕಾರಣ ಎಂದು ತಿಳಿಸಿದರು.

ರಾಯಚೂರು ಈಶಾನ್ಯ ಟೈಮ್ಸ್ ಪತ್ರಿಕೆಯ ಸಂಪಾದಕರಾದ ಶ್ರೀ ನಾಗತಿಹಳ್ಳಿ ನಾಗರಜು ಮಾತನಾಡಿ ಜಿಲ್ಲಾ ಪತ್ರಿಕೆಗಳನ್ನು ಹತ್ತಿಕ್ಕಲು ರಾಜ್ಯ ಪತ್ರಿಕೆಗಳು ತಮ್ಮ ಪತ್ರಿಕೆಗಳನ್ನು ಜಿಲ್ಲಾ ಆವೃತ್ತಿಯನ್ನಾಗಿಸಿವೆ. ಇದರಿಂದ ಭಾರಿ ಹೊಡೆತ ಸಣ್ಣ ಪತ್ರಿಕೆಗಳಿಗೆ ಆಗತ್ತಿದೆ. ಆದರಿಂದ ಜಿಲ್ಲೆಗಳಲ್ಲಿ ದಲಿತ ಪತ್ರಿಕೆಗಳು ಮೇಲೆ ಬರಲು ಜಾಹೀರಾತು ಹಾಗೂ ಮುದ್ರಣಕ್ಕೆ ಸಂಬಂಧಿಸಿದ ಉಪಕರಣಗಳನ್ನು ಸರ್ಕಾರದಿಂದ ದಲಿತರಿಗೆ ದೊರೆಯುವಂತಾಗಬೇಕೆಂದು ತಿಳಿಸಿದರು.

**ಛಾಯಾಚಿತ್ರ ಶೀರ್ಷಿಕೆ: 101**

**ಸಮಾಜ ಕಲ್ಯಾಣ ಸಚಿವ ಶ್ರೀ ಹೆಚ್. ಆಂಜನೇಯ ಅವರು ಮಾಧ್ಯಮಗಳಲ್ಲಿ ದಲಿತ ಸಂವೇದನೆ ವಿಶೇಷ ಕಾರ್ಯಾಗಾರವನ್ನು ಉದ್ಘಾಟಿಸಿದರು. ಚಿತ್ರದಲ್ಲಿ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಶ್ರೀ ಪೊನ್ನಪ್ಪ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಶ್ರೀ ಎನ್.ಆರ್. ವಿಶುಕುಮಾರ್ ಅವರು ಉಪಸ್ಥಿತರಿದ್ದರು.**

**242 :**

**ಹಿರಿಯ ಸಾಹಿತಿ ಹಾಗೂ ದಲಿತ ಚಿಂತಕ ಶ್ರೀ ಕೋಟಿಗಾನಹಳ್ಳಿ ರಾಮಯ್ಯ, ಅವರು ಮಾಧ್ಯಮಗಳಲ್ಲಿ ದಲಿತ ಸಂವೇದನೆ ವಿಶೇಷ ಕಾರ್ಯಾಗಾರದಲ್ಲಿ ವಿಷಯ ಮಂಡನೆ ಮಾಡಿದರು.**

## ಶಿಕ್ಷೆ ನೀಡುವ ಅಧಿಕಾರ ಲೋಕಾಯುಕ್ತರಿಗೆ ನೀಡಿ

**– ರಾಜ್ಯಪಾಲ ಶ್ರೀ ವಾಜುಬಾಯ್ ವಾಲಾ**

**ಬೆಂಗಳೂರು, ಜನವರಿ 8 (ಕರ್ನಾಟಕ ವಾರ್ತೆ)**

ತಪ್ಪಿತಸ್ಥರಿಗೆ ಶಿಕ್ಷೆ ನೀಡುವ ಅಧಿಕಾರವನ್ನು ಲೋಕಾಯುಕ್ತರಿಗೆ ನೀಡಿದಲ್ಲಿ ಲೋಕಾಯುಕ್ತವನ್ನು ಬಲಗೊಳಿಸಲು ಸಾಧ್ಯವೆಂದು ರಾಜ್ಯಪಾಲ ಶ್ರೀ ವಾಜುಬಾಯ್ ವಾಲಾ ಅವರು ಅಭಿಪ್ರಾಯಪಟ್ಟರು.

ಇಂದು ಬೆಳಿಗ್ಗೆ ಲೋಕಾಯುಕ್ತ ಕಚೇರಿಯಲ್ಲಿ ಏರ್ಪಡಿಸಲಾಗಿದ್ದ ಲೋಕಾಯುಕ್ತ ದಿನಾಚರಣೆಯನ್ನು ಉದ್ಘಾಟಿಸಿದ ಅವರು, ಲೋಕಾಯುಕ್ತವು ಕೇವಲ ಆಡಳಿತಾತ್ಮಕ ಕೆಲಸವನ್ನು ಮಾಡುವ ಮೂಲಕ ತಪ್ಪಿತಸ್ಥರ

ಮೇಲಿನ ತನಿಖೆಯನ್ನು ನಡೆಸಿ ಅಂತಿಮವಾಗಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುತ್ತದೆ. ಆದರೆ ಇದರಿಂದ ತಪ್ಪಿತಸ್ಥರು ಶಿಕ್ಷೆಗೆ ಒಳಗಾಗುವುದರಿಂದ ತಪ್ಪಿಸಿಕೊಳ್ಳುವ ಸಾಧ್ಯತೆಯೇ ಹೆಚ್ಚಾಗಿರುತ್ತದೆ.

ಅನ್ಯಾಯಕ್ಕೆ ಒಳಗಾದವರು ನ್ಯಾಯ ಕೋರಿ ಮನವಿ ಸಲ್ಲಿಸಿದಾಗ ಅವರನ್ನು ವರ್ಷಗಟ್ಟಲೆ ಕಾಯುವಂತೆ ಮಾಡಬಾರದು. ಹಾಗೆಯೇ ತಪ್ಪಿತಸ್ಥರು ಶಿಕ್ಷೆಯಿಂದ ತಪ್ಪಿಸಿಕೊಳ್ಳದಂತೆ ಮಾಡಲು ಲೋಕಾಯುಕ್ತಕ್ಕೆ ಎಲ್ಲಾ ಅಧಿಕಾರವನ್ನು ನೀಡಿದಲ್ಲಿ ಭ್ರಷ್ಟಾಚಾರವನ್ನು ತಡೆಗಟ್ಟಲು ಸಾಧ್ಯವೆಂದು ತಿಳಿಸಿದರು. ಕರ್ನಾಟಕ ರಾಜ್ಯದ ಲೋಕಾಯುಕ್ತವು ಹೆಚ್ಚು ಬಲಿಷ್ಟವಾಗಿದೆ. ಇಲ್ಲಿಯ ಅಧಿಕಾರಿಗಳು ತ್ವರಿತವಾಗಿ ಪ್ರಕರಣಗಳ ತನಿಖೆಯನ್ನು ನಡೆಸುತ್ತಿದ್ದಾರೆ. ಒಂದೊಂದು ರಾಜ್ಯಗಳಲ್ಲಿ ಒಂದೊಂದು ಕಾನೂನಗಳಿರುವುದು ಸರಿಯಲ್ಲ. ಎಲ್ಲಾ ರಾಜ್ಯಗಳಲ್ಲೂ ಕೇಂದ್ರದಿಂದ ಅಂಗೀಕೃತವಾದ ಒಂದೇ ರೀತಿಯ ಕಾನೂನು ಇರುವ ಜೊತೆಗೆ ಲೋಕಾಯುಕ್ತಕ್ಕೆ ಹೆಚ್ಚಿನ ಶಕ್ತಿಯನ್ನು ನೀಡಬೇಕೆಂದು ರಾಜ್ಯಪಾಲರು ಅಭಿಪ್ರಾಯಪಟ್ಟರು.

ಸುಳ್ಳು ಹೇಳುವುದು, ಕಳ್ಳತನ ಮಾಡುವುದು, ಕೊಲೆಮಾಡುವುದು, ಹಾಗೂ ಭ್ರಷ್ಟಾಚಾರ ಮಾಡುವುದು ಮನುಷ್ಯನ ಒಂದು ಸ್ವಭಾವವಾಗಿದೆ. ಭ್ರಷ್ಟಾಚಾರವೆಂಬ ಸ್ವಭಾವವು ರಕ್ತದಲ್ಲಿ ಬೆರೆತು ಹೋಗಿದೆ. ಅಂತಹ ಕೆಟ್ಟ ಸ್ವಭಾವವನ್ನು ಬದಲಾಯಿಸಲು ದೇಶದ ಪ್ರತಿಯೊಬ್ಬರೂ ಪ್ರಯತ್ನಿಸಬೇಕು. ಭ್ರಷ್ಟಾಚಾರವನ್ನು ತೊಡೆದು ಹಾಕಬೇಕಾದರೆ ಕಾನೂನಿನಡಿಯಲ್ಲಿ ಕಠಿಣ ಶಿಕ್ಷೆಯನ್ನು ಜಾರಿಗೆ ತರಬೇಕಿದೆ ಎಂದರು.

ಹಿಂದೆ ನಮ್ಮ ದೇಶದ ಸಂಸ್ಕೃತಿಯನ್ನು ಅರಿಸ್ಟಾಟಲ್ ಅಂತಹವರೇ ಮೆಚ್ಚಿಕೊಂಡಿದ್ದರು. ಅಂತಹ ಸಂಸ್ಕೃತಿಯಲ್ಲಿ ಹುಟ್ಟಿ ಬೆಳೆದ ನಾವುಗಳು ಸರಳ ಜೀವನವನ್ನು ಅಳವಡಿಸಿಕೊಂಡು ಉನ್ನತ ಮಟ್ಟದ ಯೋಚನೆಯನ್ನು ಮಾಡುವ ಮೂಲಕ ಮೊದಲು ನಮ್ಮಲ್ಲಿರುವ ಕೆಟ್ಟ ಸ್ವಭಾವನ್ನು ಬದಲಾಯಿಸಿಕೊಳ್ಳಬೇಕು ಎಂದ ಅವರು ಈ ಮುಂದಿನ ಯುವ ಪೀಳಿಗೆ ಸರಿಯಾದ ದಾರಿಯಲ್ಲಿ ಹೋಗುವಂತೆ ನೋಡಿಕೊಳ್ಳಬೇಕಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಗಡೆ ಅವರು ಮಾತನಾಡಿ 27 ವರ್ಷದ ಇತಿಹಾಸವಿರುವ ಲೋಕಾಯುಕ್ತ ಕಚೇರಿಯಲ್ಲಿ ಕಾರ್ಯನಿರ್ವಹಿಸಿರುವುದು ನನಗೆ ತುಂಬಾ ಹೆಮ್ಮೆ ಎನಿಸುತ್ತದೆ. ಪೋಲೀಸ್ ಅಧಿಕಾರಿಗಳಿಗೆ ಇಲ್ಲಿ ಕೆಲಸ ಮಾಡುವುದು ತುಂಬಾ ಕಷ್ಟದ ಕೆಲಸವಾಗಿದೆ. ಆದಾಗ್ಯೂ ರಾಜ್ಯದ ಲೋಕಾಯುಕ್ತವು ಸಾರ್ವಜನಿಕರ ದೂರುಗಳಿಗೆ ಉತ್ತಮವಾಗಿ ಸ್ಪಂದಿಸುತ್ತಾ ಕಾರ್ಯನಿರ್ವಹಿಸುತ್ತಿದೆ ಎಂದರು.

ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಎನ್. ವೆಂಕಟಾಚಲ, ಮತ್ತು ಆರ್.ವಿ. ರವೀಂದ್ರನ್ ಅವರು ಲೋಕಾಯುಕ್ತದ ಕಾರ್ಯವೈಖರಿಯ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಜ್ಯ ಲೋಕಾಯುಕ್ತ ನ್ಯಾಯಮೂರ್ತಿ ಡಾ. ವೈ. ಭಾಸ್ಕರ್ ರಾವ್ ಅವರು ಲೋಕಾಯುಕ್ತ ಟೆಲಿಫೋನ್ ಡೈರೆಕ್ಟರಿಯನ್ನು ಬಿಡುಗಡೆ ಮಾಡಿದರು.ಉಪಲೋಕಾಯುಕ್ತ ನ್ಯಾಯಮೂರ್ತಿ ಸುಭಾಷ. ಬಿ.ಅಡಿ ಅವರು ವಾರ್ಷಿಕ ವರದಿಯನ್ನು ಬಿಡುಗಡೆ ಮಾಡಿದರು. ಉಪಲೋಕಾಯುಕ್ತ ನ್ಯಾಯಮೂರ್ತಿ ಎಸ್.ಬಿ. ಮಜ್ಜಿಗೆ, ಮಾಜಿ ಉಪಲೋಕಾಯುಕ್ತ ನ್ಯಾಯಮೂರ್ತಿ ಚಂದ್ರಶೇಖರಯ್ಯ ಸೇರಿದಂತೆ ಹಲವು ಗಣ್ಯವ್ಯಕ್ತಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪಹೊ/ಬಾಬು/ಬಿ.ಜಿ.ಪಿ

**ಛಾಯಾಚಿತ್ರ ಶೀರ್ಷಿಕೆ 4054 :**

ಲೋಕಾಯುಕ್ತ ದಿನಾಚರಣೆಯನ್ನು ಇಂದು ರಾಜ್ಯಪಾಲ ಶ್ರೀ ವಾಜುಭಾಯಿ ರೂಡಭಾಯಿ ವಾಲ ಅವರು ಉದ್ಘಾಟಿಸಿದರು. ಚಿತ್ರದಲ್ಲಿ ಮಾಜಿ ಲೋಕಾಯುಕ್ತರಾದ ಶ್ರೀ ಸಂತೋಷ್‌ಹೆಗಡೆ ಹಾಗೂ ಶ್ರೀ ವೆಂಕಟಾಚಲಯ್ಯ ಅವರು ಉಪಸ್ಥಿತರಿದ್ದರು.

# ಪ.ಜಾ ವಿದ್ಯಾರ್ಥಿನಿಲಯ ಪ್ರಕಟಣೆ

**ಬೆಂಗಳೂರು, ಜನವರಿ 8 (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಧಾರ್ಮಿಕ ಸಂಸ್ಥೆಗಳು/ ಸಂಘ ಸಂಸ್ಥೆಗಳು/ ಸ್ವಯಂ ಸೇವಾ ಸಂಸ್ಥೆಗಳು/ ಟ್ರಸ್ಟ್‌ಗಳು ನಡೆಸುವ ವಿದ್ಯಾರ್ಥಿನಿಲಯಗಳು, ಶಾಲಾ ಕಾಲೇಜುಗಳು ಹಾಗೂ ಸಮುದಾಯ ಭವನಗಳ ಕಟ್ಟಡಗಳ ನಿರ್ಮಾಣಕ್ಕೆ ಸಹಾಯ ಧನ ನೀಡುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ:ಸಕಇ 44 ಪಕವಿ 2014, ದಿನಾಂಕ:15.05.2014 ರಲ್ಲಿ ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಆದೇಶ ಹೊರಡಿಸಿರುತ್ತದೆ.

ಈ ಆದೇಶ ಹಾಗೂ ಅದರೊಂದಿಗಿನ ಅನುಬಂಧ 1 ರಿಂದ 4 ರವರೆಗಿನ ಮಾರ್ಗಸೂಚಿಗಳನ್ನು ಇಲಾಖೆಯ ವೆಬ್‌ಸೈಟ್ ವಿಳಾಸ: **www.sw.kar.nic.in** ನಲ್ಲಿ ತಿಳಿಯಬಹುದಾಗಿದ್ದು, ಸದರಿ ಯೋಜನೆಯಡಿ ಸಹಾಯಧನ ಕೋರಲು ಇಚ್ಚಿಸುವ ಆಸಕ್ತ ಸಂಘ-ಸಂಸ್ಥೆಗಳು ಅಗತ್ಯ ದಾಖಲಾತಿಗಳೊಂದಿಗೆ ಸಂಬಂಧಪಟ್ಟ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಾರ್ಯಾಲಯಕ್ಕೆ ಈ ಪ್ರಕಟಣೆ ನೀಡಿದ ದಿನಾಂಕದಿಂದ 30 ದಿನಗಳ ಒಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲೆಯ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ ತಾಲ್ಲೂಕು ಸಮಾಜ ಕಲ್ಯಾಣಾಧಿಗಳ ಕಛೇರಿಯನ್ನು ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಆಯುಕ್ತ ಎಸ್.ಎನ್. ಜಯರಾಮ್ ತಿಳಿಸಿದ್ದಾರೆ.